ಬಿ. ಚಂದ್ರೇಗೌಡ, ಬೆಂಗಳೂರು

ಹೆಂಡತಿಯನ್ನು ದುರುಗುಟ್ಟಿ ನೋಡುವುದಕ್ಕೂ, ಸೂರ್ಯನನ್ನು ದುರುಗುಟ್ಟಿ ನೋಡುವುದಕ್ಕೂ ವ್ಯತ್ಯಾಸ?



ಮೊದಲನೆಯದಕ್ಕೆ ಹುಚ್ಚುಧೈರ್ಯ ಬೇಕು.

ಅಮೃತಾ ವಿ.ಹೆಚ್. ಸಗ್ರಿ, ಕುಂಜಿಬೆಟ್ಟು

ಸರ್ಕಾರಿ ನೌಕರರು ಕೆಲಸಕ್ಕೆ ಸೇರುವಾಗ ಇರಿಸುವ ಉಮೇದನ್ನು ಮುಂದೆ ಸೇವಾವಧಿಯಲ್ಲಿ ಇರಿಸಿಕೊಳ್ಳುವುದಿಲ್ಲವಲ್ಲ?

ಚಾಕುವಿನ ನಿಯಮ – ಕೊಂಡಾಗ ಹರಿತ, ಕ್ರಮೇಣ ಮೊಂಡೋ ಮೊಂಡು.

ಅರುಣ್ ಕುಲಕರ್ಣಿ, ನರೇಗಲ್ಲ

ಆಸ್ಪತ್ರೆಗಳಲ್ಲಿಯೇ ಏಕೆ ಹೆಚ್ಚಿನ ದೇವ–ದೇವತೆಗಳ ಭಾವಚಿತ್ರಗಳು ಇರುತ್ತವೆ ರಾಮ್?

ಸರಸ್ವತಿಯ ಕೃಪೆಯಿರುವ ವೈದ್ಯರಿಗೆ ಲಕ್ಷ್ಮೀಕಟಾಕ್ಷವನ್ನು ಕರುಣಿಸದಿದ್ದರೆ ರೋಗಿ ಗೋವಿಂದ ಎಂದು ಸೂಚಿಸಲು.

ಬಿ.ಆರ್. ಉಷಾ, ಕೆನಡಾ

ಕೋಳಿ ಬೆಳಗ್ಗೆಯೇ ಕೂಗುವುದೇಕೆ?



'ಹಾಳು ಮನುಷ್ಯ ಎದ್ದಿದ್ದಾನೆ. ಮೊಟ್ಟೆ, ಮಕ್ಕಳು ಜೋಪಾನ ಕಣೇ' ಎಂದು ಎಚ್ಚರಿಸಲು.

ಆರತಿ ಘಟಿಕಾರ್, ಬೆಂಗಳೂರು

ಖಾದಿ, ಖಾಕಿ, ಕಾವಿಗಳ ಮಧ್ಯೆ ಇರುವ ಸಮಾನತೆ ಏನು?

ಸದ್ಯಕ್ಕಂತೂ ಮೂರೂ ಪ್ರಕಾರಗಳ ಪ್ರತಿನಿಧಿಗಳು ಕಂಬಿ ಎಣಿಸಲು ಕಲಿತಿದ್ದಾರೆ.

ಪಿ.ಜೆ. ರಾಘವೇಂದ್ರ, ಮೈಸೂರು

ಕಾಂತಾರ ಮಾಡಿದ ದಾಖಲೆಯನ್ನು ಸಂಚಾರಿ ಪೊಲೀಸರು ಮುರಿದುಬಿಟ್ಟರಲ್ಲಾ ಸಾರ್?

'ಕಾಂತಾರ'ದಲ್ಲಿ ಕೆಲವೇ ಕಾನೂನುಮುರುಕರು; ಸಂಚಾರದಲ್ಲಿ ಅವರ ಸಂಖ್ಯೆ ಅಪಾರ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಬದುಕಿನ ರಹಸ್ಯವೇನು ಗುರುಗಳೆ?

ಯಮಯಾತನೆಯಿದ್ದರೂ ನಾಳೆ ಸರಿಯಾದೀತೆಂಬ ಆಶಾಭಾವ.

ಮಲ್ಲಿಕಾರ್ಜುನ, ಸುರಧೇನುಪುರ

ರಾಜರೇ ಹೋದಮೇಲೆ 'ರಾಜಧಾನಿ' ಪದವೇಕೆ?

ಕೋಟೆ, ಅರಮನೆಗಳೂ ಇವೆಯಲ್ಲ. ಹೂವಿನ ಲಾರಿ ಹೋದಮೇಲೂ ಗಾಳಿಯಲ್ಲಿ ಪರಿಮಳವಿರುತ್ತದೆ.

ಸುರೇಶ್ ಬಿ.ವಿ. ಬೆಂಗಳೂರು

ಪುಕ್ಕಟೆಯಾಗಿ ಅದೂ ಇದೂ ಕೊಡುತ್ತೇನೆಂದು ಹೇಳುವ ರಾಜಕಾರಣಿಗೆ ನಿಮ್ಮ ಉಪದೇಶವೇನು?

ಉಪದೇಶ ಬೇಕಾದ್ದು ಜನರಿಗೆ – ಮತವನ್ನು ದಾನ ಮಾಡಿ; ಮತ ಮಾರಿ ಮತಭ್ರಷ್ಟ ಎನಿಸಿಕೊಳ್ಳಬೇಡಿ.

ಹರಿತಸ, ಬೆಂಗಳೂರು

ಅತ್ತೆಯಲ್ಲಿ ತಾಯಿಯನ್ನು, ಸೊಸೆಯಲ್ಲಿ ಮಗಳನ್ನು ಕಾಣುವ ಕಾಲ ಬರಬಹುದೇ ರಾಮ್‌ಜೀ?

ವಿಷ–ಧಾರಾವಾಹಿಗಳು ನಿಂತ ತಕ್ಷಣ ಬರುತ್ತದಂತೆ.

ನಾರಾಯಣ ಯಾಜಿ, ಶಿರಾಲಿ

ನಾನು ನೇತ್ರದಾನ ಮಾಡಿದ್ದೇನೆ. ನೀವು?

ನನ್ನದು ಹೋಲ್‌ಸೇಲ್ ದಾನ – ಇಡೀ ದೇಹವನ್ನೇ ದಾನ ಮಾಡಿದ್ದೇನೆ.

ಚಿಕ್ಕೋಬನಹಳ್ಳಿ ಚಾಂದ್ ಬಾಷ, ತಳಕು

ನಿರ್ಭಾವುಕ ಮಾರುಕಟ್ಟೆಯಲ್ಲಿ ಭಾವನೆಗಳ ಅಂಗಡಿ ತೆರೆದರೆ?

ಬೋಡರಿಗೆ ಬಾಚಣಿಗೆ ಮಾರಬಲ್ಲ ಸೇಲ್ಸ್‌ಮನ್‌ಗಳನ್ನು ನೇಮಿಸಿಕೊಳ್ಳಿ.

ಭಾರತೀ ಗಂಗಾಧರ್, ಬೆಂಗಳೂರು

ವಿಶ್ವಶಾಂತಿಯ ಬಗ್ಗೆ ಮಾತನಾಡುವ ನಾಯಕರು ತಾವೇ ಕಚ್ಚಾಡುತ್ತಾರಲ್ಲ?

ಸರಿಯೇ. ಎರಡು ಕಚ್ಚಾಟ/ಯುದ್ಧಗಳ ನಡುವಿನ ಸಮಯವೇ ಶಾಂತಿ.

## ವಾರದ ಪ್ರಶ್ನೆ

ನಾ. ಜ್ಯೋತಿ, ಹೂವಿನಹಡಗಲಿ

ನಮ್ಮ ಮತವನ್ನು ದಾನ ಮಾಡಿದರೆ ಒಳ್ಳೆಯದೋ, ಚಲಾಯಿಸಿದರೆ ಒಳ್ಳೆಯದೋ?

ಮತದಾನ ನಿಮ್ಮ ಹಕ್ಕು. ಅದನ್ನು ಚಲಾಯಿಸಿ. ಅದು ಪ್ರಜಾಪ್ರಭುತ್ವದ ಬಾಧ್ಯತೆ. ಅದನ್ನು ನಿಭಾಯಿಸಿ.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು

ಈಗಿನ ಸಮಯ ಪದ್ಮಂ ಶರಣಂ ಗಚ್ಛಾಮಿ ಇದ್ದಂತೆ ತೋರುತ್ತದೆ?

ಚುನಾವಣಾ ಸಮಯವಲ್ಲವೆ! ಅಷ್ಟು ಹಣ ಬೇಕಾಗುತ್ತದೆ. (1 ಪದ್ಮ 10,00,00,00,00,00,000)

ಜೀವಿ, ಗೊಂಡೇದಹಳ್ಳಿ

ಹೆಣ್ಣು ಅಳಲು ಸಾವಿರ ಕಾರಣಗಳಿರಬಹುದು; ಗಂಡಿನ ಅಳುವಿನ ಹಿಂದೆ ಒಂದು ಜಡೆ ಇದ್ದೇ ಇರುವುದಂತಲ್ಲ?

ಒಪ್ಪಲಾಗದು; ಕೆಲವೊಮ್ಮೆ ಬಾಬ್‌ಕಟ್, ಬಾಯ್‌ಕಟ್, ಕೂಲ್‌ಕಟ್‌ಗಳೂ ಇರಬಹುದು.

ಪಿ. ಜಯವಂತ ಪೈ, ಕುಂದಾಪುರ

ಕುಡುಕನಿಗೂ ಸಿಡುಕನಿಗೂ ವ್ಯತ್ಯಾಸವೇನು?



ಸಿಡುಕನಿಂದ ಭಾವಮಾಲಿನ್ಯ, ಕುಡುಕನಿಂದ ಸಾಮಾಜಿಕ ಮಾಲಿನ್ಯ.

ರಾಜಶೇಖರ ಹಾದಿಮನಿ, ಧಾರವಾಡ

ಕೈ ಕೆಸರಾದರೆ ಬಾಯಿ ಮೊಸರು. ಆದರೆ ಈಗಿನವರಿಗೆ ಮೊಸರು ಮಾತ್ರ ಕುಂತಲ್ಲೇ ಬೇಕು?

ಕೆಸರೂ ಕುಳಿತಲ್ಲೇ ಆಗುತ್ತದಲ್ಲ; ಆನ್‌ಲೈನ್ ಜಾಬ್‌ಗೆ ಆನ್‌ಲೈನ್ ಪೇಮೆಂಟು.

ಬಾ.ರಾ. ಸುರೇಶ್, ಶಿವಮೊಗ್ಗ

ಹಿಂದಿನ ಗುರು–ಶಿಷ್ಯರ ಸಂಬಂಧಕ್ಕೂ, ಈಗಿನ ಗುರುಶಿಷ್ಯರ ಸಂಬಂಧಕ್ಕೂ ಏನು ವ್ಯತ್ಯಾಸ?

ಆಗಿನ ಶಿಷ್ಯರು ಗುರುವೇ ಗೂಗಲ್ ಎಂದು ನಂಬಿದ್ದರು. ಈಗಿನವರಿಗೆ ಗೂಗಲ್ಲೇ ಗುರು.

■ ರಾಮ್